## ಐದು

ಒಂದು ಮಳೆಗಾಲದ ಸಾಯಂಕಾಲ ಕಾಫಿ ಬಾರಿನಲ್ಲಿ ಶಿವಶಂಕರ ಸ್ನೇಹಿತರನ್ನು ಎದುರು ನೋಡುತ್ತ, ಕಾಫಿಗೆ ಆರ್ಡರ್ ಮಾಡಿ ಕಿಟಕಿ ಹೊರಗೆ ನೋಡುತ್ತ ಕೂತಿದ್ದ. ವಯಸ್ಸಾದ ಹಿರಿಯರೊಬ್ಬರು ಕರಿ ಕೋಟು, ಅದೇ ಬಣ್ಣದ ಟೊಪ್ಪಿ ತೊಟ್ಟು, ನೆನೆದ ಛತ್ರಿ ಹಿಡಿದು ಇವನ ಎದುರು ಬಂದು ನಿಂತರು. ತೊಟ್ಟಿಕ್ಕುತ್ತಿದ್ದ ಛತ್ರಿಯನ್ನು ಶಿವಶಂಕರ ಕೂತಿದ್ದ ಟೇಬಲ್ಲಿಗೆ ಆನಿಸಿ ಇಟ್ಟರು. ನೀರ ಹನಿಗಳು ಮಾರ್ಬಲ್ ನೆಲವನ್ನು ತೋಯಿಸಿದವು. ಟೇಬಲ್ ಕೆಳಗೆ ಉದುರಿದ್ದ ತಿಂಡಿಗೆ ಮುತ್ತಿದ್ದ ಇರುವೆಗಳು ಈ ಹನಿ ಪ್ರವಾಹದಲ್ಲಿ ತೇಲತೊಡಗಿದವು.

ಆ ಹಿರಿಯರು ಶಿವಶಂಕರನನ್ನು 'ನೀವು ಪದ್ದಣ್ಣನ ಅಳಿಯ ಅಲ್ಲವಾ?' ಎಂದು ಕೇಳಿದಾಗ ಇವನಿಗೆ ಸಖೇದಾಶ್ಚರ್ಯವಾಯಿತು.

'ಕ್ಷಮಿಸಬೇಕು! ತಾವ್ಯಾರು ಅಂತ ಗೊತ್ತಾಗಲಿಲ್ಲ.'

'ನಾನೂ ನಿಮ್ಮ ಮಾವ ಬಾಲ್ಯ ಸ್ನೇಹಿತರು ಕಣಯ್ಯಾ. ಜೊತೆಯಲ್ಲಿ ಆಡಿದವರು; ಓದಿದವರು. ಅವನು ಅದೃಷ್ಟವಂತ. ನರಳದೆ ಹೋಗಿಬಿಟ್ಟ.'

'...'

'ಆದರೂ ಮಗು, ಪದ್ದಣ್ಣ ಅದೊಂದು ವಿಷಯವನ್ನು ನಿನ್ನಿಂದ ಮುಚ್ಚಿಡಬಾರದಿತ್ತು?'

'ಯಾವ ವಿಷಯ?'

'ಇದನ್ನು ನಾನು ಸಾಯುವತನಕ ಯಾರ ಬಳಿಯೂ ಹೇಳಬಾರದು ಎಂದು ನನ್ನಿಂದ ಅವನು ಭಾಷೆ ತೆಗೆದುಕೊಂಡಿದ್ದ. ಈಗ ಅವನೇ ಇಲ್ಲ. ಅಲ್ಲದೆ ನೀನು ಇಷ್ಟು ಉದಾರಿ ಮನುಷ್ಯ ಅಂತ ಗೊತ್ತಿದ್ದರೆ ಬಹುಶಃ ಅವನು ಅದನ್ನು ಮುಚ್ಚಿಡುತ್ತಿರಲಿಲ್ಲವೇನೊ!'

ಶಿವಶಂಕರನಿಗೆ ಸಹನೆ ತಪ್ಪುತ್ತಿತ್ತು.

'ಯಾವುದು ಅಂತ ಹೇಳಬಾರದೆ ಯಜಮಾನರೆ' ಎಷ್ಟೇ ನಯಗೊಳಿಸಿದರೂ ಅವನ ಧ್ವನಿಯಲ್ಲಿ ಅಸಹನೆ ಒಡೆದು ಕಾಣುತ್ತಿತ್ತು.

ಅವರು ಇವನು ಆರ್ಡರ್ ಮಾಡಿದ್ದ (ಅವರಿಗಾಗಿಯೆ) ಕಾಫಿ–ಬಜಿ ತಿನ್ನುತ್ತ ಹೇಳಲುಪಕ್ರಮಿಸಿದರು.

## ಆರು

ರಾತ್ರಿ ಊಟ ಬೇಡ ಎಂದಾಗ ಎಲ್ಲೋ ಹೊರಗಡೆ ತಿಂದಿರುತ್ತಾರೆ ಎಂದುಕೊಂಡ ಸುಮತಿಗೆ ಹಾಸಿಗೆಯಲ್ಲಿ ಅವನು ಕೊಸರಿಕೊಂಡಾಗ ವಿಷಯ ಬೇರೇನೋ ಇದೆ ಎಂದು ಫೀಲ್ ಆಯಿತು. ಕೆದಕುವುದಕ್ಕೆ ಅವಳಿಗೆ ಅಂದು ಮನಸ್ಸಿರಲಿಲ್ಲ. ಸುಮ ಶಾಲೆ ಶುರುವಾಯಿತು ಅಂತ ತನ್ನ ಮನೆಗೆ ಅದೇ ಸಂಜೆ ಹೊರಟುಹೋಗಿದ್ದಳು. ಆ ಬೇಸರ ಅವಳನ್ನು ಸುತ್ತಿಕೊಂಡಿತ್ತು.

ಬೆಳಗ್ಗೆ ಕಾಫಿ–ತಿಂಡಿಗೂ ನಿಲ್ಲದೆ ಶಿವಶಂಕರ ಹೊರಟುಬಿಟ್ಟ. ಸುಮತಿಗೆ ವಿಷಯ ಗಂಭೀರ ಅನ್ನಿಸಿತು. ಸಂಜೆ ಎಂದಿನಂತೆ ಬಂದಾಗ 'ಯಾಕೆ, ನನ್ನಿಂದ ಏನಾಗಿದೆ ನಿಮಗೆ? ಸುಮ ಹೊರಟು ಹೋದಳು ಅಂತಾನಾ?' ಎಂದು ಅವನ ಬಲಭುಜವನ್ನು ಹಿಡಿದುಕೊಂಡಳು. ತನ್ನ ಎಡಗೈಯಿಂದ ಅವಳ ರಟ್ಟೆಯನ್ನು ಕಿತ್ತೆಸೆಯುವಂತೆ ಬೀಸಿದ. ಅವಳಿಗೆ ಆಘಾತವಾಯಿತು. ಅವಳು ಸುಧಾರಿಸಿಕೊಳ್ಳುವ ಮುನ್ನವೆ ಛಟಾರನೆ ಅಂದುಬಿಟ್ಟ: 'ನಿನ್ನ ಮಿಂಡನ ಮಗಳು ಹೋದರೆ ನನಗೇನಾಗಬೇಕು?'

ಸುಮತಿಯ ಎದೆ ಧಸ್ಸಕ್ಕೆಂದಿತು.

★★★